5.	1997-98 (ನ) ಮತ್ತು (ಗ್ರಾ)	35000	6750	-	-

1997-98ನೇ ಸಾಲಿನಲ್ಲಿ ಕ್ರೋಢೀಕೃತ ಮಾಡಿದ ಅನುದಾನವು ವರ್ಷದ ಅಂತ್ಯದಲ್ಲಿ ಬಿಡುಗಡೆಯಾಗಿರುವುದರಿಂದಲೂ ಮತ್ತು ಜಿಲ್ಲೆಗಳ ಪುನರ್ವಿಂಗಡಣೆಯಿಂದಾಗಿ ತಾಲ್ಲೂಕುವಾರು ಗುರಿಗಳನ್ನು ನಿಗದಿಪಡಿಸಿರುವುದರಲ್ಲಿ ವಿಳಂಬವಾಗಿದ್ದರಿಂದಲೂ ಫಲಾನುಭವಿಗಳ ಆಯ್ಕೆಯನ್ನು ಮಾಡುವ ಸಮಿತಿಯು ಚುನಾವಣೆಗಳ ಕಾರಣ ಫಲಾನುಭವಿಗಳ ಆಯ್ಕೆಯನ್ನು ಪೂರ್ಣಗೊಳಿಸಿದ ಕಾರಣ ಪ್ರಗತಿ ಇರುವುದಿಲ್ಲ.

ಇ) 1998-99ನೇ ಸಾಲಿನಲ್ಲಿ ಅಂಬೇಡ್ಕರ್ ವಸತಿ ಯೋಜನೆಯಡಿ ರಾಜ್ಯದಲ್ಲಿ 20000 ಮನೆಗಳನ್ನು ನಿರ್ಮಿಸಲು ಗುರಿ ನಿಗದಿಪಡಿಸಲಾಗುವುದು.

ವಿಷಯ: ಹಾವೇರಿ ಜಿಲ್ಲೆಯಲ್ಲಿ ಕೇಂದ್ರಸ್ಥಾನದಲ್ಲಿ ವಾಸಿಸದೆ ಇರುವ ಅಧಿಕಾರಿಗಳು.

1031 (1538)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ವಾಸಿಸಬೇಕಾದ ವಿವಿಧ ಇಲಾಖೆಯ ಅಧಿಕಾರಿಗಳ ಹುದ್ದೆ ಹಾಗೂ ಅವರ ಹೆಸರುಗಳೇನು?

ಆ) ಈ ರೀತಿ ಕೇಂದ್ರ ಸ್ಥಾನದಲ್ಲಿ ವಾಸಿಸದೇ ಇರುವ ಅಧಿಕಾರಿಗಳು ಯಾರು? ಎಲ್ಲಿಂದ ಕೇಂದ್ರ ಸ್ಥಾನಕ್ಕೆ ಓಡಾಡುತ್ತಿದ್ದಾರೆ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 1. ಶ್ರೀ ಸಿ.ಕೃಷ್ಣಪ್ಪ, ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ.

2. ಶ್ರೀ ಕೆ.ವಿ.ಗಗನದೀಪ್, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

3. ಶ್ರೀ ಸಿ.ಎಂ.ಹಿರೇಮಠ, ಪ್ರಭಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.

4. ಶ್ರೀ ಎಲ್.ಎಲ್.ನಾಯಕ್, ಜಿಲ್ಲಾ ನೋಂದಣಾಧಿಕಾರಿಗಳು.

5. ಶ್ರೀ ಎಸ್.ಬಿ.ಶಿವಪೂರ, ಪ್ರಭಾರ ಉಪ ನಿಬಂಧಕರು, ಸಹಕಾರ ಸಂಘಗಳು.

6. ಶ್ರೀ ಅಶೋಕ ಚಲವಾದಿ, ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

7. ಉಪನಿರ್ದೇಶಕರು, ಪಶುಸಂಗೋಪನಾ ಇಲಾಖೆ.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ (ಹುದ್ದೆ ತುಂಬಿರುವುದಿಲ್ಲ)

9. ಶ್ರೀ ಬಿ.ವೈ.ಕೋಠಿ, ಪ್ರಭಾರ ಜಿಲ್ಲಾ ಖಜಾನೆ ಅಧಿಕಾರಿಗಳು.

ಆ) ಎಲ್ಲಾ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ವಾಸಿಸುತ್ತಿದ್ದಾರೆ.

ವಿಷಯ: ವೈಯಕ್ತಿಕ ಕೊಳವೆಬಾವಿ ಯೋಜನೆ.

1032 (1644)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈಯಕ್ತಿಕ ಕೊಳವೆಬಾವಿ ಕೊರೆಯುವುದನ್ನು ನಿಲ್ಲಿಸಿದ್ದರಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ನಿಷೇಧವನ್ನು ತೆಗೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ ಮತ್ತು ಆ) ಈಗಾಗಲೇ ಕೊರೆದಿರುವ ವೈಯಕ್ತಿಕ ಕೊಳವೆ ಬಾವಿಗಳಿಗೆ ವಿದ್ಯುತ್ ಪೂರೈಕೆ ಇನ್ನೂ ಪೂರ್ತಿಯಾಗದೇ ಇರುವ ಪ್ರಯುಕ್ತ ಸಧ್ಯಕ್ಕೆ ನಿಲ್ಲಿಸಲಾಗಿದೆ. ವಿದ್ಯುದ್ದೀಕರಣ ಪ್ರಗತಿಯನ್ನು ಆಧರಿಸಿ ಈ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

ವಿಷಯ: ಹೊಸದುರ್ಗ ತಾಲ್ಲೂಕಿನಲ್ಲಿ ಸೇಂದಿ ಕರಾಬ್ ಜಮೀನು ಸಾಗುವಳಿ.

1033 (1540)

ಶ್ರೀ ಟಿ.ಹೆಚ್.ಬಸವರಾಜ್ (ಹೊಸದುರ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?